

ಮಹಮ್ಮದ್ ಕುಂಞಿ ಅವರ ‘ಉಮ್ಮಾ’ ಕಾದಂಬರಿ ಆಗಸ್ಟ್ 27ರಂದು ‘ಫೇಸ್‌ಬುಕ್’ನಲ್ಲಿ ಬಿಡುಗಡೆಯಾಯಿತು. ಅವರ ಹಿಂದಿನ ಕಾದಂಬರಿ ‘ಓದಿರಿ’ ಬಿಡುಗಡೆ ನಡೆದಿದ್ದುದು ಕೂಡ ಫೇಸ್‌ಬುಕ್‌ನಲ್ಲೇ. ಫೇಸ್‌ಬುಕ್‌ನಲ್ಲೇ ಏಕೆ ಬಿಡುಗಡೆ ಎಂದರೆ, ‘ಸಾಂಪ್ರದಾಯಿಕ ಬಿಡುಗಡೆಗೆ ಬದಲಾಗಿ, ಫೇಸ್‌ಬುಕ್‌ನಲ್ಲಿ ಪುಸ್ತಕ ಬಿಡುಗಡೆ ಮಾಡುವುದರಿಂದ ವಿಶ್ವದ ವಿವಿಧ ಭಾಗಗಳಲ್ಲಿನ ಕನ್ನಡಿಗರಿಗೂ ಮಾಹಿತಿ ತಿಳಿಯುತ್ತದೆ’ ಎಂದು ಬೊಳುವಾರರು ಹೇಳುತ್ತಾರೆ. ಪುಸ್ತಕದ ಕೆಲವು ಭಾಗಗಳನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸುವ ಮೂಲಕ ಓದುಗರ ಗಮನ ಸೆಳೆಯುವ ತಂತ್ರವನ್ನೂ ಅವರು ಮಾಡಿದ್ದರು. ಇದೆಲ್ಲದರ ಪರಿಣಾಮವಾಗಿ ₹ 280 ಬೆಲೆಯ ‘ಉಮ್ಮಾ’ ಬಿಡುಗಡೆಯಾದ ನಾಲ್ಕೈದು ದಿನಗಳಲ್ಲೇ 400 ಪ್ರತಿಗಳು ಮಾರಾಟವಾಗಿವೆ.

ಸಾಂಪ್ರದಾಯಿಕ ಪುಸ್ತಕ ಬಿಡುಗಡೆಗೆ ಹೋಲಿಸಿದರೆ, ಫೇಸ್‌ಬುಕ್ ಅನ್ನು ಪುಸ್ತಕ ಬಿಡುಗಡೆಗೋ ಪ್ರಚಾರಕ್ಕೋ ಬಳಸಿಕೊಳ್ಳುವುದು ಹೆಚ್ಚು ಪರಿಣಾಮಕಾರಿ. ವೆಚ್ಚದ ಪ್ರಶ್ನೆಯಂತೂ ಇಲ್ಲವೇ ಇಲ್ಲ. ಸಭಾಂಗಣದ ಬಾಡಿಗೆ, ವೇದಿಕೆ ಸಿಂಗಾರ, ಅತಿಥಿಗಳ ನಿರ್ವಹಣೆ, ತಿಂಡಿ–ಕಾಫಿಯೆಂದು ಏನೆಲ್ಲ ಸೇರಿಕೊಂಡು ಒಂದು ಪುಸ್ತಕದ ಬಿಡುಗಡೆಯೆಂದರೆ ₹ 20–30 ಸಾವಿರ ಖರ್ಚಿನ ಬಾಬತ್ತು. ಕೊಂಚ ಚೆನ್ನಾಗಿ ಕಾರ್ಯಕ್ರಮ ಮಾಡಬೇಕೆಂದರೆ ₹ 50 ಸಾವಿರ ಖರ್ಚಾದರೂ ಆದೀತು. ಇಷ್ಟೆಲ್ಲ ಮಾಡಿದ ನಂತರ ಪುಸ್ತಕದ ನಲವತ್ತೋ ಐವತ್ತೋ ಪ್ರತಿ ಖರ್ಚಾದರೆ ಹೆಚ್ಚು. ನಾಲ್ಕೈದು ಪುಸ್ತಕ ಕಾರ್ಯಕ್ರಮಗಳು ಒಮ್ಮೆಗೇ ನಡೆಯುವ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಸುದ್ದಿ ಬರುತ್ತದೆಂದು ನಿರೀಕ್ಷಿಸುವುದೂ ಕಷ್ಟ.

### ಫೇಸ್‌ಬುಕ್ ಎನ್ನುವ ನೋಟಿಸ್ ಬೋರ್ಡ್!

ಇತ್ತೀಚಿನ ದಿನಗಳಲ್ಲಿ ಕನ್ನಡ ಪುಸ್ತಕಗಳಿಗೆ ಫೇಸ್‌ಬುಕ್ ನೋಟಿಸ್ ಬೋರ್ಡ್ ಹಾಗೂ ಪೇಟೆಯ ರೂಪದಲ್ಲಿ ಬಳಕೆಯಾಗುತ್ತಿರುವುದಂತೂ ನಿಜ. ಫೇಸ್‌ಬುಕ್‌ನಲ್ಲಿ ಹೆಚ್ಚು ಜನಪ್ರಿಯರಾದವರ ಪುಸ್ತಕಗಳಿಗೆ ಬೇಡಿಕೆ ಕೂಡ ಸಹಜವಾಗಿಯೇ ಹೆಚ್ಚಾಗಿರುತ್ತದೆ. ಓದುಗರು ತಮ್ಮ ಓದಿನ ಟಿಪ್ಪಣಿಗಳನ್ನು ತಂತಮ್ಮ ಫೇಸ್‌ಬುಕ್ ಗೋಡೆಯ ಮೇಲೆ ದಾಖಲಿಸುವ ಮೂಲಕವೂ ಪುಸ್ತಕ ಪ್ರಚಾರ ಸಾಧ್ಯವಾಗುತ್ತಿದೆ. ಫೇಸ್‌ಬುಕ್‌ನಲ್ಲಿ ಗುರ್ತಿಸಿಕೊಂಡ ಲೇಖಕರ ಚೊಚ್ಚಿಲ ಪುಸ್ತಕ ಬಿಡುಗಡೆ ಕಾರ್ಯಕ್ರಮಗಳಿಗೆ ಜನ ಕಿಕ್ಕಿರಿದ ಕೆಲವು ಉದಾಹರಣೆಗಳನ್ನು ನೋಡಿದರೆ, ಪುಸ್ತಕ ಪೇಟೆಗೂ ಸಾಮಾಜಿಕ ತಾಲತಾಣಗಳಿಗೂ ಇರುವ ನಂಟು ಸ್ಪಷ್ಟವಾಗುತ್ತದೆ.

‘ಆಕೃತಿ’ ಪುಸ್ತಕದಂಗಡಿಯ ಗುರುಪ್ರಸಾದ್ ಅವರಂತೂ ಫೇಸ್‌ಬುಕ್ ಗೋಡೆಯನ್ನು ತಮ್ಮ ಅಂಗಡಿಯ ನೋಟಿಸ್ ಬೋರ್ಡ್‌ನಂತೆಯೇ ಬಳಸುತ್ತಾರೆ. ಆಕೃತಿಗೆ ಬಂದ ಹೊಸ ಪುಸ್ತಕಗಳ ವಿವರಗಳಿಂದ ಹಿಡಿದು, ಅಪರೂಪದ ಹಳೆಯ ಪುಸ್ತಕಗಳ ವಿವರಗಳನ್ನೂ ಫೇಸ್‌ಬುಕ್ ನಲ್ಲಿ ನಮೂದಿಸುತ್ತಾರೆ. ತಾವು ಓದಿದ ಪುಸ್ತಕಗಳ ಕುರಿತ ಟಿಪ್ಪಣಿಗಳನ್ನೂ ದಾಖಲಿಸುತ್ತಾರೆ. ಫೇಸ್‌ಬುಕ್ ಮೂಲಕವೇ ಪುಸ್ತಕಪ್ರಿಯರ ಸಣ್ಣ ಬಳಗವೊಂದನ್ನು ರೂಪಿಸುವುದು ಅವರಿಗೆ ಸಾಧ್ಯವಾದಂತಿದೆ. ಅಷ್ಟು ಮಾತ್ರವಲ್ಲ, ಆಕೃತಿಗೆ ಬರುವ ಲೇಖಕರ ಚಿತ್ರಪಟಗಳು, ಅವರೊಂದಿಗಿನ ಒಡನಾಟದ ವಿವರಗಳು, ಪುಸ್ತಕಗಳ ನಡುವೆ ನಡೆಯುವ ಗೋಷ್ಠಿಗಳು – ಎಲ್ಲ ವಿವರಗಳಿಗೂ ಗುರು ಅವರ ಗೋಡೆಯಲ್ಲಿ ಸ್ಥಾನವಿದೆ.

ಫೇಸ್‌ಬುಕ್ ನೋಟಿಸ್ ಬೋರ್ಡ್ ರೂಪದಲ್ಲಿ ಒದಗುತ್ತಿರುವ ಹಿನ್ನೆಲೆಯಲ್ಲಿ, ಕನ್ನಡ ಪುಸ್ತಕಪೇಟೆಯ ಪಾಲಿಗೆ ಫೇಸ್‌ಬುಕ್ ಎನ್ನುವುದು ವರದಾನವೇ? ‘ಹಾಗೇನೂ ಇಲ್ಲ’ ಎನ್ನುತ್ತಾರೆ ಹುಬ್ಬಳ್ಳಿಯ ‘ಸಾಹಿತ್ಯ ಪ್ರಕಾಶನ’ದ ಎಂ.ಎ. ಸುಬ್ರಹ್ಮಣ್ಯ.

‘ಒಂದೆಡೆ ಸಾಮಾಜಿಕ ಜಾಲತಾಣಗಳು ಹೆಚ್ಚು ಪ್ರಭಾವಶಾಲಿ ಆಗುತ್ತಿವೆ. ಇನ್ನೊಂದೆಡೆ ಕನ್ನಡ ಪುಸ್ತಕಪೇಟೆಯಲ್ಲಿ ನಿರಾಶಾದಾಯಕ ವಾತಾವರಣ ಕಾಣಿಸುತ್ತಿದೆ’ ಎನ್ನುವುದು ಅವರ ಅನಿಸಿಕೆ. ‘‘ಸೋಷಿಯಲ್ ಮೀಡಿಯಾದಲ್ಲಿನ ಹೊಸ ಓದುಗರು ಇಂದಿನ ಕನ್ನಡ ಲೇಖಕರನ್ನು ನಂಬುತ್ತಿಲ್ಲ. ಇವರ ಬಗ್ಗೆ ನಮಗೆ ಗೊತ್ತಿಲ್ಲವೇನು? ಇದೆಂಥ ಪುಸ್ತಕ? ಹೀಗೆ ಕೃತಿ ಮತ್ತು ಕೃತಿಕಾರನನ್ನು ನಿರಾಕರಿಸುವ ಪ್ರವೃತ್ತಿ ಹೆಚ್ಚುತ್ತಿದೆ’’ ಎನ್ನುತ್ತಾರೆ. ಏಕೆ ಹೀಗೆ? ಎನ್ನುವುದಕ್ಕೆ ಅವರು ನೀಡುವ ಉತ್ತರ ಕುತೂಹಲಕರವಾಗಿದೆ.



## ಹನಿ ಹನಿ ಓದುಗರ ಬಳಗ

ಓದುಗರ ಬಳಗವೊಂದನ್ನು ರೂಪಿಸಿಕೊಳ್ಳುವ ಮೂಲಕ ಪುಸ್ತಕ ಮಾರಾಟವನ್ನು ಯಶಸ್ವಿಯಾಗಿ ಮಾಡಬಹುದು ಎನ್ನುವುದಕ್ಕೆ ಉದಾಹರಣೆ ‘ಹನಿ ಹನಿ ಇಬ್ಬನಿ’ ಬಳಗ. ‘ನಾ ನಿನಗಿದ್ದರೆ ನೀನೆನಗೆ’ ಎನ್ನುವುದು ಸುಮಾರು ಇನ್ನೂರ ಐವತ್ತು ಮಂದಿ ಸದಸ್ಯರಿರುವ ಈ ಬಳಗದ ನೀತಿ. ವಾಟ್ಸ್‌ಆ್ಯಪ್ ಮೂಲಕ ಬಳಗದ ಸದಸ್ಯರ ನಡುವೆ ಸಂವಹನ ನಡೆಯುತ್ತದೆ.

ಬಳಗದ ಲೇಖಕರ ಪುಸ್ತಕಗಳನ್ನು ಕೆಲವು ಸದಸ್ಯರು 10–20 ಪ್ರತಿ ಖರೀದಿಸುತ್ತಾರೆ. ಇದರಿಂದ ಪುಸ್ತಕ ಮಾರಾಟ ಕೈ ಕಚ್ಚುವುದಿಲ್ಲ ಎನ್ನುತ್ತಾರೆ ಬಳಗದ ಲೇಖಕ ತುಮಕೂರಿನ ಖುಷಿಕೃಷ್ಣ. ಅವರ ಇತ್ತೀಚಿನ ಪುಸ್ತಕ, ‘ಖುಷಿ ಪ್ರಕಾಶನ’ದಿಂದ ಪ್ರಕಟವಾಗಿರುವ ‘ಪ್ರೀತಿಯ ಕೋತಿಮರಿ’ ಕೃತಿಯ ಸಾವಿರಕ್ಕೂ ಹೆಚ್ಚು ಪ್ರತಿಗಳು ಗೆಳೆಯರ ಮೂಲಕವೇ ಮಾರಾಟವಾಗಿವೆ. ಈ ಬೆಂಬಲದಿಂದ ಉತ್ತೇಜಿತರಾಗಿರುವ ಅವರೀಗ ‘ಕೋತಿಮರಿ’ಯ ಎರಡನೇ ಭಾಗವನ್ನು ಪ್ರಕಟಿಸುವ ಸಿದ್ಧತೆಯಲ್ಲಿದ್ದಾರೆ. ಪ್ರಕಟಣೆಗೆ ಮುನ್ನವೇ ಐನೂರು ಪ್ರತಿಗಳ ಮುಂಗಡ ಮಾರಾಟದ ಹಣ ಕೈಸೇರಿದೆ ಎನ್ನುತ್ತಾರೆ ಖುಷಿಯಿಂದ ಕೃಷ್ಣ. ಲೇಖಕನೊಬ್ಬನಿಗೆ ಇನ್ನೇನು ಬೇಕು?